13	ಮುಂಡಗೋಡ	ಆದಿಜಾಂಭವ ಪ್ರೌಢಶಾಲೆ, ಮುಂಡಗೋಡ, ಉ.ಕ ಜಿಲ್ಲೆ (ಕನ್ನಡ ಮಾಧ್ಯಮ)	ಆದಿಜಾಂಭವ ಹರಿಜನ ಸೇವಾ ಸಂಘ, ಸನವಳ್ಳಿ, ಮುಂಡಗೋಡ ತಾ. ಉ.ಕ.ಜಿಲ್ಲೆ. ಪ.ಜಾ/ಪ.ಪಂಗಡದ ಆಡಳಿತ ಮಂಡಳಿ.

ಆ) ಸರ್ಕಾರಿ ಆದೇಶ ಸಂಖ್ಯೆ ಇಡಿ 59 ಪಿಎಂಸಿ 2006, ದಿನಾಂಕ: 06–10–2007ರ ಪ್ರಕಾರ ಅನುದಾನಕ್ಕೆ ಒಳಪಡಿಸಲಾದ ಮಾನದಂಡಗಳ ಮಾರ್ಗಸೂಚಿಗಳನ್ನು ಅನುಸರಿಸಲಾಗಿದೆ.

ಇ) ಅನುದಾನಕ್ಕೆ ಒಳಪಡಿಸಲಾದ ಶಿಕ್ಷಣ ಸಂಸ್ಥೆಗಳು ಕನಿಷ್ಟ ಮೂಲಭೂತ ಸೌಕರ್ಯ ಹೊಂದಿವೆ ಹಾಗೂ ಮಕ್ಕಳ ಕೊರತೆ ಇರುವುದಿಲ್ಲ.

ರಾಜ್ಯದಲ್ಲಿ ಸರ್ಕಾರಿ ಪಾಲಿಟೆಕ್ನಿಕ್ ಮಂಜೂರು ಮಾಡುವುದು

296 (695) ಶ್ರೀ ಜಯಚಂದ್ರ ಬಿ.ಟಿ (ಶಿರಾ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜುಗಳನ್ನು ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ತುಮಕೂರು ಜಿಲ್ಲೆ, ಶಿರಾ ಪಟ್ಟಣವು ನಗರ ಸಭೆಯಾಗಿದ್ದು, ಹೆಚ್ಚಿನ ಜನಸಂಖ್ಯೆಯನ್ನು ಹೊಂದಿದ್ದು, ತಾಂತ್ರಿಕ ಕಾಲೇಜು ಸ್ಥಾಪನೆಗೆ ಎಲ್ಲಾ ಮೂಲ ಸೌಕರ್ಯಗಳನ್ನು ಹೊಂದಿರುವುದರಿಂದ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜು ಮಂಜೂರು ಮಾಡಲು ಸರ್ಕಾರ ಚಿಂತನೆ ನಡೆಸುವುದೇ?

ಶ್ರೀ ಅರವಿಂದ ಲಿಂಬಾವಳಿ (ಉನ್ನತ ಶಿಕ್ಷಣ ಸಚಿವರು) :

ಅ) ಇಲ್ಲ.

ಆ) ಸರ್ಕಾರ ಚಿಂತನೆ ನಡೆಸುವುದಿಲ್ಲ.